ಎಮ್.ವಿ.ಸಿ. ನಂ.167/2022

RW-1

ದಿನಾಂಕಃ 11-08-2025.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ 1 ನೇ ಎದುರುದಾರರ ಪರ ಮಾನ್ಯ ಶ್ರೀ SND ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ವಿರೇಶ ಬೀರಾದರ ಎನ್ನುವವರ DL ನ Extract ನ್ನು ನಿಆರ್.1, ವಾಹನ ಸಂಖ್ಯೆ KA-50-9500 ಇದರ B register extract ನ್ನು ನಿಆರ್.2, RTO Vijayapura ಇವರು ಕೊಟ್ಟಿರುವ ಇವರ ಹಿಂಬಹರವನ್ನು ನಿಆರ್.3 ಎಂದು ಗುರುತಿಸಲಾದವು. ಪ್ರಸ್ತುತ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ಅರ್ಜಿದಾರರ ಪರ ಮಾನ್ಯ ಶ್ರೀ MNP ವಕೀಲರಿಂದಃ**

3. ನಮ್ಮ ಅರ್ಜಿಯಲ್ಲಿ ಅಪಘಾದ ದಿನಾಂಕಕ್ಕಾದಂತೆ ಮೃತರ ವಯಸ್ಸು ಹಾಗೂ ಅವರ ಆದಾಯವನ್ನು ಸರಿಯಾಗಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಸದರಿ ಲಾರಿಯ ಚಾಲಕನತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿದ್ದರೂ ಕುಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 2 ನೇ ಎದುರುದಾರರ ಪರ ಮಾನ್ಯ ಶ್ರೀ RND ವಕೀಲರಿಂದಃ**

4. ಸದರಿ ಅಪಘಾತವು ದಿಃ 21-04-2021 ರಂದು ಆಗಿರುತ್ತದೆ ಎಂದರೆ ಸರಿ. ಪೊಲೀಸರು ಸದರಿ ಆಟೋ ಚಾಲಕ ಹಾಗೂ ಅದರ ಮಾಲೀಕರ ಮೇಲೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವಾಗುವಲ್ಲಿ ನನ್ನ ಚಾಲಕನ ತಪ್ಪಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತವು ಸದರಿ ಆಟೋ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ಸದರಿ ಆಟೋದಲ್ಲಿ ಕೇವಲ ಮೂರು ಜನ ಕುಳಿತುಕೊಳ್ಳಬಹುದಾಗಿದ್ದು ಆದರೆ ಅದರಲ್ಲಿ ಸುಮಾರು 10-15 ಜನ ಕುಳಿತುಕೊಂಡಿದ್ದರಿಂದ ಅದರ ಬ್ಯಾಲೆನ್ಸ್ ತಪ್ಪಿ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತವಾದ ದಿನದಂದು ಆಟೋ ಚಾಲಕನ ಹತ್ತಿರ ಅಂದರೆ ಮೂರನೇ ಆರೋಪಿ ಹತ್ತಿರ DL ಇತ್ತೋ

ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. Form No.45 ರ ಮೂಲ ದಾಖಲಾತಿ RTO ದವರ ಹತ್ತಿರ ಇರುತ್ತದೆ. ಸದರಿ ಅಪಘಾತದ ದಿನದಂದು ನನ್ನ ಸದರಿ ವಾಹನಕ್ಕೆ permit ಇರದ ಕಾರಣ ಅದರ ಜೆರಾಕ್ಸ್ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸದರಿ ವಾಹನ non transport ದಲ್ಲಿ ಬರುವುದಿಲ್ಲ ಎಂದರೆ ಸರಿ. ಸದರಿ DL ದಿನಾಂಕ 19-01-2022 ದಿಂದ 18-01-2027 ರವರೆಗೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದ ದಿನಾಂಕ 19-01-2022 ರಿಂದ 18-01-2027 ರವರೆಗೆ DL ರಿನಿವಲ್ ಆಗಿರುವುದಾಗಿ ಹೇಳುತ್ತಾರೆ. ನಿಆರ್ 1 ರಲ್ಲಿ ದಿಃ 20-09-2018 ರಿಂದ 20-09-2021 ರವರಗೆ ಸದರಿ DL ಚಾಲ್ತಿಯಲ್ಲಿರುತ್ತದೆ. ಸದರಿ ಅಪಘಾವಾದ ದಿನಂಾಕಂದ ನನ್ನ ಸದರಿ ವಾಹನಕ್ಕೆ permit ಇರಲಿಲ್ಲ ಹಾಗೂ ನನ್ನ ಚಾಲಕ DL ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ವಿಮಾ ಕಂಪನಿಯ ನಿಭಂದನೆಗಳನ್ನು ಉಲ್ಲಂಘನೆ ಮಾಡಿದ್ದರಿಂದ ಅರ್ಜಿದಾರರಿಗೆ ನಾನೇ ಪರಹಾರದ ಹಣವನ್ನು ಕೊಡುವ ಭಾದ್ಯತೆಯನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.